ಸಿ.ಸಿ. ನಂಃ 865/2020
ಪಿ.ಡಬ್ಲ್ಯೂ: 01

**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲು: ಶ್ರೀ ವಿ.ಎಸ್.ಆರ್. ಪ್ರತಿವಾದಿ ಪರ ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ. ವರೆಗೂ ಓದಿಕೊಂಡಿರುತ್ತೇನೆ. ನನಗೆ ಕನ್ನಡ ಮಾತ್ರ ಓದಲು ಬರೆಯಲು ಬರುತ್ತದೆ, ಇಂಗ್ಲಿಷ್ ಬರುವುದಿಲ್ಲ. ಹಣದ ವಿಚಾರವಾಗಿ ಆರೋಪಿಯ ವಿರುದ್ಧ ಈ ಪ್ರಕರಣವನ್ನು ದಾಖಲಿಸಿರುತ್ತೇನೆ. ನನ್ನ ಜನ್ಮ ದಿನಾಂಕ 01.06.1973. ಆರೋಪಿಯು ನನಗೆ 8 ವರ್ಷಗಳಿಂದ ಪರಿಚಯಸ್ತರಿರುತ್ತಾರೆ. ಆರೋಪಿಯು ರಾಂಪುರದಲ್ಲಿ 2016 ರಿಂದ 2019 ವರೆಗೆ ಮಣಿಕಂಠ ಟ್ರೇಡರ್ಸ್ ಪರ್ಟಿಲೈಜರ್ ಅಂಗಡಿ ಇಟ್ಟಿದ್ದರು ಎಂದರೆ ಸರಿ. ಆರೋಪಿಯು ಆರ್ಥೀಕವಾಗಿ ಸದೃಡರಾಗಿದ್ದರು ಎಂದರೆ ಸರಿ. ಆರೋಪಿಯು 2019 ವ್ಯಯಕ್ತಿಕ ಕಾರಣಕ್ಕಾಗಿ ಮಣಿಕಂಠ ಟ್ರೇಡರ್ಸ್ ಪರ್ಟಿಲೈಜರ್ ಅಂಗಡಿಯನ್ನು ಮುಚ್ಚಿರುತ್ತಾರೆ ಎಂದರೆ ಸರಿ. ಆರೋಪಿಯು ಅಂಗಡಿ ನಡೆಸುತ್ತಿದ್ದಾಗ ನಾನು ಸಾಕಷ್ಟು ಬಾರಿ ಹೋಗಿರುತ್ತೇನೆ ಎಂದರೆ ಸರಿ. ಆರೋಪಿಯು ವ್ಯಯಕ್ತಿಕವಾಗಿ ಅಂಗಡಿಯನ್ನು ಬಿಟ್ಟು ಹೋಗುತ್ತಿದ್ದ ಸಂದರ್ಭದಲ್ಲಿ ನಾನು ನಿಭಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯ ಅಂಗಡಿಯನ್ನು ಔಷಧಿ ಹಾಗೂ ಬೀಜಗಳನ್ನು ಖರೀದಿಸುತ್ತಿದ್ದೆ ಎಂದರೆ ಸರಿ. ಆರೋಪಿಯು ತನ್ನ ಅಂಗಡಿಯಲ್ಲಿ ಲೆಕ್ಕ ಪುಸ್ತಕವನ್ನು ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ಲೆಕ್ಕ ಪುಸ್ತಕದಲ್ಲಿ ನಾನು ಔಷದಿ ಮತ್ತು ಬೀಜಗಳನ್ನು ಖರೀದಿಸುತ್ತಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಹಣ ನೀಡುವ ಸಂಬಂಧವಾಗಿ ನನ್ನ ಹೆಸರಿನಲ್ಲಿ ಒಂದು ಖಾತೆ ಇಡಲಾಗಿತ್ತು ಎಂದರೆ ಸರಿ.ಆರೋಪಿಯ ಅಂಗಡಿಯಲ್ಲಿ ನಾನು ಹಾಗೂ ನನ್ನ ಮುಖಾಂತರ ಖರೀದಿಸುತ್ತಿದ್ದ ವ್ಯಕ್ತಿಗಳ ಔಷದಿ ಮತ್ತು ಬೀಜಗಳ ಲೆಕ್ಕವನ್ನು ಸದರಿ ಖಾತೆಯಲ್ಲಿ ಬರೆಯಲಾಗುತ್ತಿತ್ತು ಹಾಗೂ ಹಣ ಜಮೆ ಮಾಡಿದಾಗ ಅದನ್ನು ನಮೂದಿಸಲಾಗುತ್ತಿತ್ತು ಎಂದರೆ ಸರಿ. ಆರೋಪಿಯ ಖಾಯಂ ವಾಸ ಯು. ರಾಜಾಪುರ, ಸೊಂಡೂರು ತಾಲ್ಲೂಕು ಆಗಿರುತ್ತದೆ ಎಂದರೆ ಸರಿ. ಆರೋಪಿಯ ಹೆಸರಿನಲ್ಲಿ ಚರ ಮತ್ತು ಸ್ಥಿರ ಆಸ್ತಿಗಳು ಅಂದರೆ ಹೊಲ ಮನೆಗಳು ಇರುತ್ತವೆ ಎಂದರೆ ಸರಿ. ಆರೋಪಿಯು 2019 ರಲ್ಲಿ ಮಣಿಕಂಠ ಟ್ರೇಡರ್ಸ್ ಪರ್ಟಿಲೈಜರ್ ಅಂಗಡಿಯನ್ನು ಮುಚ್ಚಿದ ನಂತರ ನನ್ನ ಮತ್ತು ಆರೋಪಿಯ ಮಧ್ಯ ಹಣದ ವಿಚಾರವಾಗಿ ವೈಷಮ್ಯ ಉಂಟಾಗಿತ್ತು ಎಂದರೆ ಸಾಕ್ಷಿಯು ನಾನು ನವೆಂಬರ್ 2019 ಆರೋಪಿಗೆ ಹಣ ನೀಡಿದ್ದು ಆತ ಒಂದು ವಾರದಲ್ಲಿ ಹಿಂದಿರುಗಿಸುವುದಾಗಿ ಹೇಳಿ ನೀಡದೇ ಇದ್ದಾಗ ಮಾತುಕತೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಹಣವನ್ನು ನೀಡಿದ ದಿನಾಂಕವನ್ನು ಹೇಳಲು ನೆನಪಿಲ್ಲ. ಆರೋಪಿಯು ಒಂದು ವಾರದಲ್ಲಿ ಹಣವನ್ನು ಹಿಂದಿರುಗಿಸುತ್ತೇನೆ

ಎಂಬ ವಿಚಾರವನ್ನು ದೂರಿನಲ್ಲಿ ಹೇಳಿ ಬರೆಸಿಲ್ಲ. ನಾನು ಆರೋಪಿಗೆ 14 ಲಕ್ಷ ಹಣವನ್ನು ನೀಡಿರುತ್ತೇನೆ. ಹಣದ ಮೂಲದ ಬಗ್ಗೆ ನಾನು ದೂರಿನಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.ನಾನು 14 ಲಕ್ಷ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ದಾಳಿಂಬೆ ಬೆಳೆದ ಹಣವನ್ನು ನಗದು ರೂಪದಲ್ಲಿ ಮನೆಯಲ್ಲಿ ಇಟ್ಟುಕೊಂಡಿದ್ದೆ ಎಂದು ನುಡಿದಿರುತ್ತಾರೆ. ನಾನು ದಾಳಿಂಬೆಯನ್ನು ಜಮೀನಿನಲ್ಲಿ ಬೆಳೆದಿದ್ದೆ. ನಾನು ವಿಠಲಾಪುರದ ಸ.ನಂ. 27/1 ರಲ್ಲಿ 4 ಎಕರೆ 20 ಗುಂಟೆ ವಿಸ್ತೀರ್ಣದಲ್ಲಿ ದಾಳಿಂಬೆ ಬೆಳೆಯನ್ನು ಬೆಳೆದಿದ್ದೆ. ಸದರಿ ಜಮೀನು ನನ್ನ ಹೆಸರಿನಲ್ಲಿದೆ. ಸದರಿ ವಿಚಾರವನ್ನು ನಾನು ದೂರಿನಲ್ಲಿ ಹೇಳಿ ಬರೆಸಿಲ್ಲ. ನಾನು ಬೆಳೆದ ದಾಳಿಂಬೆಯನ್ನು ನನ್ನ ಜಮೀನಿನಲ್ಲಿಯೇ ಮಾರಾಟ ಮಾಡಿರುತ್ತೆನೆ. ನಾನು ದಾಳಿಂಬೆ ಬೆಳೆಯನ್ನು ಬೆಳೆದಿರುವುದಿಲ್ಲ ಹಾಗೂ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಳಿಂಬೆ ಬೆಳೆಯನ್ನು ಬೆಳೆದು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ್ದರೆ ಅದಕ್ಕೆ ಸಂಬಂಧಿಸಿದ ಬಿಲ್ ರಸೀದಿಗಳು ನನ್ನ ಬಳಿ ಇರುತ್ತಿತ್ತು ಎಂದರೆ ಸಾಕ್ಷಿಯು ಮಾರುಕಟ್ಟೆಯಲ್ಲಿ ಮಾರಾಟ ಮಾಡಿಲ್ಲ ಜಮೀನಿನಲ್ಲಿಯೇ ಬೆಳೆಯನ್ನು ಮಾರಾಟ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. 2019 ರಲ್ಲಿ ದಾಳಿಂಬೆ ಬೆಳೆಯಿಂದ ನನಗೆ ಒಟ್ಟು 18 ಲಕ್ಷ ಆದಾಯ ಬಂದಿರುತ್ತದೆ. ಸದರಿ ಆದಾಯ 2019 ರಲ್ಲಿ ಯಾವ ದಿನಾಂಕ, ತಿಂಗಳು ಬಂದಿರುತ್ತದೆ ಎಂದು ಬಹಳ ದಿನಗಳು ಆದ ಕಾರಣ ಹೇಳಲು ನೆನಪಿಲ್ಲ. ದಾಳಿಂಬೆ ಬೆಳೆಯಿಂದ ನನಗೆ ಒಟ್ಟು 18 ಲಕ್ಷ ಆದಾಯ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾಳಿಂಬೆ ಬೆಳೆಯಿಂದ 18 ಲಕ್ಷ ಆದಾಯ ಬಂದಿರುತ್ತದೆ ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ವಿಚಾರವನ್ನು ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆರೋಪಿಯು ನಮ್ಮ ಮನೆಯ ಹತ್ತಿರ ಬಂದು ಹಣವನ್ನು ಕೇಳಿರುತ್ತಾರೆ. ಆರೋಪಿಯು ಹಣ ಕೇಳಿದ ದಿನಾಂಕವನ್ನು ಹೇಳಲು ನೆನಪಿಲ್ಲ. ಆರೋಪಿಯು ಹಣ ಕೇಳಿದ ನಂತರ 1-2 ದಿನ ಆರೋಪಿಯೊಂದಿಗೆ ಚರ್ಚಿಸಿ ನಂತರ ಹಣ ನೀಡಿರುತ್ತೇನೆ. ಆರೋಪಿಯು ನನ್ನ ಮನೆಗೆ ಬಂದು ಹಣವನ್ನು ಕೇಳಿಲ್ಲ ಎಂದರೆ ಸರಿಯಲ್ಲ. ನನಗೆ 14 ಲಕ್ಷ ಹಣವನ್ನು ಹೊಂದಿಸುವ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಹಾಗೂ ವೃತ್ತಿ ತೆರಿಗೆಯನ್ನು ಪಾವತಿಸುತ್ತಿಲ್ಲ.

ಆರೋಪಿಗೆ ಹಣವನ್ನು ನೀಡುವಾಗ ಒಂದು ಚೆಕ್ಕನ್ನು ಪಡೆದಿರುತ್ತೇನೆ. ಪ್ರಾಮಿಸರಿ ಪತ್ರವನ್ನು ಪಡೆಯಲಾಗಿದೆಯೇ ಎಂದರೆ ಸಾಕ್ಷಿಯು ಬೇರೆ ವ್ಯವಹಾರಕ್ಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಪ್ರಾಮಿಸರಿ ಪತ್ರವನ್ನು ಯಾವ ದಿನಾಂಕ, ತಿಂಗಳು, ವರ್ಷದಂದು ಪಡೆದಿರುತ್ತೇನೆ

ಎಂದು ಹೇಳಲು ನೆನಪಿಲ್ಲ. ಸದರಿ ಪ್ರಾಮಿಸರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನ್ನ ತಕರಾರು ಇರುವುದಿಲ್ಲ. ಆರೋಪಿಗೆ ಹಣವನ್ನು ನೀಡುವಾಗ ನನ್ನ ಹೆಂಡತಿ ಮತ್ತು ನನ್ನ ತಮ್ಮ ಪ್ರಕಾಶ ಹಾಜರು ಇದ್ದರು. ಆರೋಪಿಯ ಜೊತೆ ಯಾರು ಬಂದಿರುವುದಿಲ್ಲ. 500 ರೂ. ಮುಖಬೆಲೆಯ 28 ಕಟ್ಟು ಹಣ ಇತ್ತು. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು 8 ವರ್ಷಗಳು ಆದ ಕಾರಣ ನೆನಪಿಲ್ಲ ಎಂದು ನುಡಿದಿರುತ್ತಾರೆ. ದೂರಿನ್ನು ಇಂಗ್ಲಿಷಿನಲ್ಲಿ ಬರೆದಿರುವುದರಿಂದ ಅದರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಖುದ್ದು ಗೊತ್ತಿಲ್ಲ ಎಂದರೆ ಸಾಕ್ಷಿಯು ಹಣದ ವಿಚಾರದ ಬಗ್ಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿಯು ಹಣ ಪಡೆದ ವಾರ ಹಾಗೂ 15 ದಿನಗಳಲ್ಲಿ ವಾಪಸ್ ನೀಡುತ್ತೇನೆ ಎಂದು ಹೇಳಿದ್ದರು. ನವೆಂಬರ್ ತಿಂಗಳಿನಲ್ಲಿ ಆರೋಪಿಯಿಂದ ಚೆಕ್ ನಂ. 925593 ಚೆಕ್ಕನ್ನು ಮಣಿಕಂಠ ಟ್ರೇಡರ್ಸ್ ನಲ್ಲಿ ಪಡೆದಿರುತ್ತೇನೆ ಎಂದರೆ ಸರಿ. ಆರೋಪಿಯಿಂದ ಚೆಕ್ ನಂ. 925583 ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಬೇರೆ ಹಣದ ವ್ಯವಹಾರಕ್ಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಚೆಕ್ ನಂ. 925583 ಚೆಕ್ಕನ್ನು 5-10 ಸಾವಿರ ಕೈಬದಲು ಹಣದ ಸಲುವಾಗಿ ಆರೋಪಿಯಿಂದ ಪಡೆದಿರುತ್ತೇನೆ. ಸದರಿ ಚೆಕ್ ನಂ. 925583 ಚೆಕ್ಕನ್ನು ನಾನು ಭದ್ರತೆಗಾಗಿ ಪಡೆದಿದ್ದೆ ಎಂದರೆ ಸರಿ. ಸದರಿ ಚೆಕ್ ನಂ. 925583 ಚೆಕ್ಕು ನನ್ನ ಮನೆಯಲ್ಲಿರುತ್ತದೆ. ಸಾಕ್ಷಿ ಮುಂದುವರೆದು ಚೆಕ್ ನಂಬರ್ ನೆನಪಿಲ್ಲ ಆದರೆ ಚೆಕ್ಕು ಮನೆಯಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಮನೆಯಲ್ಲಿ ಆರೋಪಿಗೆ ಸೇರಿದ 2 ಚೆಕ್ಕುಗಳು ಇರುತ್ತವೆ. ಸದರಿ ಚೆಕ್ಕುಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು 2 ಚೆಕ್ಕುಗಳಲ್ಲಿ ಒಂದು ಚೆಕ್ಕಿಗೆ ಸಂಬಂಧಿಸಿದಂತೆ ಈ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಚೆಕ್ ನಂ. 925593 ಚೆಕ್ಕನ್ನು ನನ್ನ ಸಂಬಂಧಿಕರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಂಬಂಧಿಕರ ಮೂಲಕ ಸದರಿ ಚೆಕ್ಕಿಗೆ ಸಂಬಂಧಿಸಿದಂತೆ 2 ಲಕ್ಷಕ್ಕಾಗಿ ಇದೇ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣವು ಚಳ್ಳಕೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನವೆಂಬರ್ ತಿಂಗಳಿನಲ್ಲಿ ಕೇಳಿದ್ದು ನಾನು 2-3 ದಿನಗಳ ನಂತರ ನೀಡಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಒಂದು ವಾರ ಗಡುವು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವಾರದ ನಂತರ ನಾನು ಆರೋಪಿಯನ್ನು ಹಣವನ್ನು ಹಿಂದಿರುಗಿಸುವಂತೆ ಕೇಳಿದ್ದ ಆತ ಇವತ್ತು ನಾಳೆ ಕೊಡುತ್ತೇವೆ ಎಂದು ಸುಮಾರು 2-3 ತಿಂಗಳು ಹೇಳಿಕೊಂಡು ಬಂದಿರುತ್ತಾನೆ. ನಾನು ಜನೇವರಿ

ತಿಂಗಳಿನಲ್ಲಿ ಚೆಕ್ಕನ್ನು ನಗಧಿಕರಣಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿಯು 14 ಲಕ್ಷ ಹಣವನ್ನು ಪಡೆದಿದ್ದಾರೆ ಎಂದು ಹೇಳಲಾದ ಸಮಯದಲ್ಲಿ ಹಣವನ್ನು ಹಿಂದಿರುಗಿಸಲು 3 ತಿಂಗಳ ಗಡುವನ್ನು ಕೇಳಿರುವುದಿಲ್ಲ. ಆರೋಪಿಗೆ ಸಂಬಂಧಿಸಿದ ಬಂಗಾರ ಉಂಗುರ, ಓಲೆ ಹಾಗೂ ಮಾಂಗಲ್ಯ ಸರ ನನ್ನ ಬಳಿ ಇರುತ್ತವೆ ಎಂದರೆ ಸರಿಯಲ್ಲ. ಆರೋಪಿಯು ಇತ್ತಿಚೇಗೆ ರಾಂಪುರದಲ್ಲಿ ವಾಸವಾಗಿರುತ್ತಾನೆ ಎಂದರೆ ಸರಿ. 2019 ರಿಂದ ಆರೋಪಿಯು ಇಂಡಿಗೋ ಸೀಡ್ಸ್ ಪ್ರೈವೇಟ್ ಲಿಮಿಟೆಡ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಅನುಪಸ್ಥಿತಿಯಲ್ಲಿ ನಾನು ಆರೋಪಿಯ ಅಂಗಡಿಯನ್ನು ನೋಡಿಕೊಳ್ಳುತ್ತಿದ್ದಾಗ ಆರೋಪಿಗೆ ಸೇರಿದ ಚೆಕ್ಕುಗಳನ್ನು ತೆಗೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಿಸಿದ ಚೆಕ್ ನಂಬರ್ ಹೇಳಲು ಆಗುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದ ಚೆಕ್ಕನ್ನು ದಿ: 06.01.2020 ರಂದು ಐ.ಓ.ಬಿ. ಬ್ಯಾಂಕಿಗೆ ನಗದಿಕರಣಕ್ಕೆ ಹಾಜರು ಪಡಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದ ಚೆಕ್ಕು ಆರೋಪಿಯ ಯಾವ ಬ್ಯಾಂಕಿಗೆ ಸಂಬಂಧಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಿ: 06.01.2020 ರಂದು ಚೆಕ್ಕನು ನಗಧಿಕರಣಕ್ಕೆ ಹಾಜರು ಪಡಿಸಿದಾಗ ಆರೋಪಿಗೆ ತಿಳಿಸಿರುವುದಿಲ್ಲ. ಬ್ಯಾಂಕಿನವರು ದಿನಾಂಕ 23.01.2020 ರಂದು ಹಿಂಬರಹವನ್ನು ನೀಡಿರುತ್ತಾರೆ. ಸದರಿ ದಿನಾಂಕದಂದು ಬ್ಯಾಂಕಿನವರು ಹಿಂಬರಹವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿ: 23.01.2020 ರಂದು ಪಡೆದ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆಯೇ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿಗೆ ನೋಟಿಸ್ ನ್ನು ಕಳುಹಿಸಿರುತ್ತೇನೆ. ಯಾವ ದಿನಾಂಕದಂದು ನೋಟಿಸ್ ಕಳುಹಿಸಿರುತ್ತೇನೆ ಎಂದು ಹೇಳಲು ನೆನಪಿಲ್ಲ. ಬಳ್ಳಾರಿ ಜಿಲ್ಲೆಯ ವಕೀಲರುಗಳಾದ ಎ. ಪಾಂಡುರಂಗಯ್ಯ, ವೈ.ಎಂ. ಶಿವಕುಮಾರ ಸ್ವಾಮಿ, ಜಿ.ಬಿ. ಚಿದಾನಂದರವರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವತ್ತು ಸದರಿ ವಕೀಲರುಗಳನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಭೇಟಿ ಆಗಿ ಮಾಹಿತಿ ನೀಡಿರುವುದಿಲ್ಲ. ಸದರಿಯವರ ಮುಖಾಂತರ ನಾನು ಆರೋಪಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ಸದರಿ ವಕೀಲರುಗಳು ನನಗೆ ಪರಿಚಯ ಇಲ್ಲದ ಕಾರಣ ಅವರು ನೀಡಿರುವ ನೋಟಿಸ್ ಕಾನೂನಾತ್ಮಕ ನೋಟಿಸ್ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಪರಿಚಯ ಇಲ್ಲ ಹಾಗೂ ಭೇಟಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಗೆ ವಿಜಯಲಕ್ಷ್ಮಿ ವಕೀಲರ ಮೂಲಕ ನೋಟಿಸ್ ನೀಡಿರುತ್ತೇನೆ. ವಿಜಯಲಕ್ಷ್ಮಿ ವಕೀಲರ ಮೂಲಕ ಕಳುಹಿಸಿದ ನೋಟಿಸ್ ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಗ್ಗೆ ನೆನಪಿಲ್ಲ. ಸದರಿ ನೋಟಿಸ್ ನ್ನು ಆರೋಪಿಯ ಯಾವ ವಿಳಾಸಕ್ಕೆ ಕಳಹಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನೋಟಿಸ್ ನಲ್ಲಿ

ಬರೆದಿರುವ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ವಕೀಲರಿಗೆ ಚೆಕ್ಕು ಹಾಗೂ ಹಿಂಬರಹವನ್ನು ಮಾತ್ರ ನೀಡಿದ್ದು ಬೇರೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಆರೋಪಿಗೆ ನೋಟಿಸ್ ಜಾರಿ ಆಗಿರುವ ಬಗ್ಗೆ ಗೊತ್ತಿದಿದೇಯೇ ಸಾಕ್ಷಿಯು ನೊಟಿಸ್ ವಾಪಸ್ ಆಗಿರುತ್ತದೆ ಎಂದು ವಕೀಲರ ಮೂಲಕ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿಗೆ ಕಳುಹಿಸಿದ ನೊಟಿಸ್ ವಾಪಸ್ ಬಂದಿದ್ದು, ಸದರಿ ನೋಟಿಸ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಗ್ಗೆ ಗೊತ್ತಿಲ್ಲ. ನಾನು ಆರೋಪಿಗೆ ನೋಟಿಸ್ ನ್ನು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ನೋಟಿಸ್ ನ್ನು ತಿರಸ್ಕರಿಸಿವುದಿಲ್ಲ ಎಂದರೆ ಸರಿಯಲ್ಲ. ವಾಪಸ್ ಬಂದ ನೋಟಿಸ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆಯೇ ಎಂದರೆ ಸಾಕ್ಷಿಯು ಅಂಚೇ ಇಲಾಖೆಯವರು ನಮಗೆ ಯಾವುದೇ ದಾಖಲೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನೋಟಿಸ್ ತಿರಸ್ಕರಿಸಲಾಗಿರುತ್ತದೆ ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದು ಹೇಳಲು ನೆನಪಿಲ್ಲ. ನೋಟಿಸ್ ಗೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ.

**(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಮ್ಎಫ್‌ಸಿ.,ಮೊಳಕಾಲ್ಮೂರು.